# ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 118 ಇಆಇ 2014

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:23ನೇ ಡಿಸೆಂಬರ್ 2014

## ಸುತ್ತೋಲೆ

ವಿಷಯ: ರಾಜ್ಯ ಸರ್ಕಾರದ ವಿವಿಧ ಇಲಾಖೆ ಮಂಡಳ, ನಿಗಮ, ಸ್ಥಳೀಯ ಸಂಸ್ಥೆ ಇತ್ಯಾದಿಗಳು ನೀಡುವ ಸೇವೆಗಳನ್ನು ನಿವಾಸಿಗಳು ಪಡೆಯುವ ಸಲುವಾಗಿ ಆಧಾರ್ (ಯುಐಡಿ) ಸಂಖ್ಯೆಯನ್ನು ನಿವಾಸಿಗಳ ಗುರುತಿನ ಹಾಗೂ ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

ಉಲ್ಲೇಖ: ದಿನಾಂಕ: 15.07.2011ರ ಸರ್ಕಾರದ ಆದೇಶ ಸಂ: ಸಿಆಸುಇ 5 ಪಿಆರ್‌ಜೆ 2011.

* * * * *

E-GOV
JD (ad)/ADD

ರಾಜ್ಯ ಸರ್ಕಾರದ ಇಲಾಖೆಗಳು ನೀಡುವ ಸೇವೆಗಳನ್ನು ಪಡೆಯುವ ಸಲುವಾಗಿ ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಮತ್ತು ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂದು ಎಲ್ಲಾ ಇಲಾಖೆಗಳಿಗೆ ಉಲ್ಲೇಖಿತ ದಿನಾಂಕ: 15.07.2011ರ ಸರ್ಕಾರಿ ಆದೇಶದನ್ವಯ ಸರ್ಕಾರದ ಸೂಚನೆಯನ್ನು ನೀಡಲಾಗಿದೆ ಮತ್ತು ಆಯಾಯ ಇಲಾಖೆಯ ಆಡಳಿತ ವ್ಯಾಪ್ತಿಯೊಳಗೆ ಬರುವ ಮಂಡಳ, ನಿಗಮ, ಸ್ಥಳೀಯ ಸಂಸ್ಥೆ ಇತ್ಯಾದಿಗಳು ನೀಡುವ ಸೇವೆಗಳಿಗೆ ಸಂಬಂಧಿಸಿದಂತೆ ಅದೇ ರೀತಿಯ ಸೂಚನೆಯನ್ನು, (ಅಂದರೆ, ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಮತ್ತು ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂಬ ಸೂಚನೆ) ಅವುಗಳಿಗೆ (ಆಯಾಯ ಇಲಾಖೆಯ ವತಿಯಿಂದ) ನೀಡತಕ್ಕದೆಂದು ಸಹ ಎಲ್ಲಾ ಇಲಾಖೆಗಳಿಗೆ ಸೂಚನೆಯನ್ನು ನೀಡಲಾಗಿದೆ. ಇದರಿಂದ ನಿವಾಸಿಗಳಿಗೆ ಉಂಟಾಗುವ ಅನುಕೂಲಗಳನ್ನು ಸಹ ದಿನಾಂಕ: 15.07.2011ರ ಸದರಿ ಆದೇಶದಲ್ಲಿ ನಮೂದಿಸಲಾಗಿದೆ. (ಆ ಆದೇಶದ ಪ್ರತಿಯನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ.)

2. ದಿನಾಂಕ: 15.07.2011ರ ಸದರಿ ಆದೇಶದನ್ವಯ ನೀಡಿದ ಸೂಚನೆಗಳನ್ನು ಈ ಮೂಲಕ ಪುನರುಚ್ಚರಿಸಲಾಗಿದೆ ಹಾಗೂ ಅದರಂತೆ ಕರ್ನಾಟಕ ಸರ್ಕಾರ ಸಚಿವಾಲಯದ ಆಡಳಿತ ಇಲಾಖೆಗಳು ಆಯಾಯ ಇಲಾಖೆಯ ವ್ಯಾಪ್ತಿಗೆ ಬರುವ ಇಲಾಖೆಗಳಿಗೆ ಮತ್ತು ಮಂಡಳ, ನಿಗಮ, ಸ್ಥಳೀಯ ಸಂಸ್ಥೆ ಇತ್ಯಾದಿಗಳಿಗೆ ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಮತ್ತು ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂದು ಸೂಚಿಸಬೇಕೆಂದು ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳನ್ನು ಈ ಮೂಲಕ ಮತ್ತೊಮ್ಮೆ ಕೋರಿದೆ.

PS-1334 29/12/14

23/12/2014
(ಎಸ್.ವೀಣಾ)
ಪೀಠಾಧಿಕಾರಿ-1
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ
(ಇ-ಆಡಳಿತ)

JDPS-761 31/12/14

ರವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ-ಈ ಸುತ್ತೋಲೆಯನ್ನು ವಿಶೇಷ ರಾಜ್ಯ ಪತ್ರದಲ್ಲಿ ಪ್ರಕಟಿಸಿ, ಅದರ 500 ಪ್ರತಿಗಳನ್ನು ಪೀಠಾಧಿಕಾರಿ-1, ಸಿಆಸುಇ(ಇ-ಆಡಳಿತ), ಬಹುಮಹಡಿ ಕಟ್ಟಡ, ಬೆಂಗಳೂರು ಇವರಿಗೆ ಒದಗಿಸಬೇಕೆಂದು ಕೋರಿದೆ.

ಪ್ರತಿ,

1. ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಬೆಂಗಳೂರು
2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಯವರುಗಳು
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಯವರುಗಳು
4. ಎಲ್ಲಾ ಇಲಾಖಾ ಮುಖ್ಯಸ್ಥರು
5. ಎಲ್ಲಾ ಜಿಲ್ಲಾಧಿಕಾರಿಯವರುಗಳು
6. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
7. ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಇ-ಆಡಳಿತ ಕೇಂದ್ರ
8. ನಿರ್ದೇಶಕರು, ಇಡಿಸಿಎಸ್ ನಿರ್ದೇಶನಾಲಯ
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ರಾಜ್ಯ ಸರ್ಕಾರದ ವಿವಿಧ ಇಲಾಖೆ ಮಂಡಳಿ, ನಿಗಮ, ಸ್ಥಳೀಯ ಸಂಸ್ಥೆ ಇತ್ಯಾದಿಗಳು ನೀಡುವ ಸೇವೆಗಳನ್ನು ನಿವಾಸಿಗಳು ಪಡೆಯುವ ಸಲುವಾಗಿ ಆಧಾರ್ (ಯುಐಡಿ) ಸಂಖ್ಯೆಯನ್ನು ನಿವಾಸಿಗಳ ಗುರುತಿನ ಹಾಗೂ ವಿಳಾಸದ ಸಾಕ್ಷ್ಯಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡುವ ಬಗ್ಗೆ.

ಓದಲಾಗಿದೆ: 1. ದಿನಾಂಕ: 17.12.2009ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 159 ಇಜಿಎಮ್ 2009 (ಪಿ-1).
2. ದಿನಾಂಕ: 16.01.2010ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 159 ಇಆಇ 2009(ಭಾ-1).
3. ಅಧ್ಯಕ್ಷರು, ಯುಐಡಿಎಐ, ನವದೆಹಲಿ ಇವರು ಮಾನ್ಯ ಮುಖ್ಯಮಂತ್ರಿಯವರಿಗೆ ಉದ್ದೇಶಿಸಿದ ದಿನಾಂಕ: 14.09.2010ರ ಅರೆ ಸರ್ಕಾರಿ ಪತ್ರ ಸಂಖ್ಯೆ: /4(4)/56/2010-ಯುಐಡಿಎಐ/ಛೇರ್ಮನ್/.
4. ದಿನಾಂಕ: 20.05.2011ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 7 ಯೋಜನೆ 2010.
5. ಶ್ರೀ ಆರ್.ಎಸ್.ಶರ್ಮ, ಡೈರೆಕ್ಟರ್ ಜನರಲ್ ಮತ್ತು ಮಿಷನ್ ಡೈರೆಕ್ಟರ್, ಯುಐಡಿಎಐ, ಭಾರತ ಸರ್ಕಾರ, ಯೋಜನಾ ಆಯೋಗ, ನವದೆಹಲಿ ಇವರು ಮುಖ್ಯ ಕಾರ್ಯದರ್ಶಿಯವರಿಗೆ ಉದ್ದೇಶಿಸಿದ ದಿನಾಂಕ: 31.12.2010ರ ಅರೆ ಸರ್ಕಾರಿ ಪತ್ರ ಸಂಖ್ಯೆ: /ಜಿ-14011/22/2010-ಯುಐಡಿಎಐ.
6. ಸಚಿವ ಸಂಪುಟ ಕಾರ್ಯದರ್ಶಿ, ನವದೆಹಲಿ ಇವರು ಮುಖ್ಯ ಕಾರ್ಯದರ್ಶಿಯವರಿಗೆ ಉದ್ದೇಶಿಸಿದ ದಿನಾಂಕ: 04.04.2011ರ ಅರೆ ಸರ್ಕಾರಿ ಪತ್ರ ಸಂಖ್ಯೆ: 281/1/5/2011-ಟಿಎಸ್.

ಪ್ರಸ್ತಾವನೆ:

1. ಭಾರತದ ಎಲ್ಲಾ ನಿವಾಸಿಗಳಿಗೆ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡುವ ಯೋಜನೆಯನ್ನು ಕೇಂದ್ರ ಸರ್ಕಾರ ರೂಪಿಸಿದೆ. ಅದನ್ನು ಜಾರಿಗೊಳಿಸುವ ಸಲುವಾಗಿ ಭಾರತದ ಅದ್ವಿತೀಯ ಗುರುತಿನ ಪ್ರಾಧಿಕಾರ [Unique Identification Authority of India (UIDAI)]ವನ್ನು ಕೇಂದ್ರ ಸರ್ಕಾರ ಯೋಜನಾ ಆಯೋಗದಡಿಯಲ್ಲಿ ಸ್ಥಾಪಿಸಿದೆ. ಭಾರತೀಯ ನಿವಾಸಿಗಳಿಗೆ ಅದ್ವಿತೀಯ ಗುರುತಿನ ಸಂಖ್ಯೆಗಳು ನೀಡುವುದು ಆ ಪ್ರಾಧಿಕಾರದ ಮೂಲ ಕಾರ್ಯವ್ಯಾಪ್ತಿಯಾಗಿದೆ ಮತ್ತು ಸಾರ್ವಜನಿಕರಿಗೆ, ವಿಶೇಷವಾಗಿ, ಬಡಜನರಿಗೆ ಸೇವೆಗಳನ್ನು ಹಾಗೂ ಕಲ್ಯಾಣ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ತಲುಪಿಸುವುದನ್ನು ಖಾತ್ರಿ ಪಡಿಸಿಕೊಳ್ಳುವುದು ಈ ಯೋಜನೆಯ ಮುಖ್ಯ ಉದ್ದೇಶಗಳ ಪೈಕಿ ಒಂದಾಗಿರುತ್ತದೆ.

1.1. ನಿವಾಸಿಗಳನ್ನು ಅದ್ವಿತೀಯವಾಗಿ ಗುರುತಿಸಿ, ಪ್ರತಿ ವೈಯಕ್ತಿಕ ನಿವಾಸಿಗೆ ಸಂಬಂಧಿಸಿದಂತೆ, ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ದತ್ತಾಂಶದ ಆಧಾರದ ಮೇಲೆ ಅವರಿಗೆ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡಲಾಗುವುದು. ಪ್ರತಿಯೊಬ್ಬ ನಿವಾಸಿಯಿಂದ ಈ ಕೆಳಕಂಡ ಜನವಿವರಣೆ (demographic) ಮಾಹಿತಿಯನ್ನು ಪಡೆಯಲಾಗುವುದು:-

- ಹೆಸರು
- ಜನ್ಮ ದಿನಾಂಕ
- ವಿಳಾಸ ಮತ್ತು
- ಲಿಂಗ

ಇವುಗಳ ಪೈಕಿ ಹೆಸರು, ಜನ್ಮ ದಿನಾಂಕ ಮತ್ತು ವಿಳಾಸವನ್ನು ದಾಖಲಾತಿಗಳ ಸಾಕ್ಷ್ಯಾಧಾರದ ಮೇಲೆ ಸಮರ್ಥಿಸತಕ್ಕದ್ದು. ಆಧಾರ್ ಅದ್ವಿತೀಯ ಗುರುತಿನ ಸಂಖ್ಯೆಯನ್ನು ನೀಡಬೇಕೆಂದು ಕೋರುವ ನಿವಾಸಿಗಳು ಅವರ ಹೆಸರು ಮತ್ತು ಭಾವಚಿತ್ರ ಇರುವ ಗುರುತಿನ ಸಾಕ್ಷ್ಯಾಧಾರವನ್ನು (proof of identity) ಮತ್ತು ಅವರ ಜನ್ಮ ದಿನಾಂಕ ಮತ್ತು ವಿಳಾಸಕ್ಕೆ (proof of address) ಸಂಬಂಧಿಸಿದಂತೆ, ಒಂದು ಅಥವಾ ಒಂದಕ್ಕಿಂತ ಹೆಚ್ಚು ಸಾಕ್ಷ್ಯಾಧಾರವನ್ನು ಒದಗಿಸತಕ್ಕದ್ದು. ಜನವಿವರಣೆ (demographic) ವಿವರಗಳನ್ನು ಸಮರ್ಥಿಸುವ ಸಲುವಾಗಿ ಒಬ್ಬ ನಾಗರೀಕನು ಸಲ್ಲಿಸಬಹುದಾದ ದಾಖಲೆಗಳ ಒಂದು ಮಾಸ್ಟರ್ ಪಟ್ಟಿಯನ್ನು ಸದರಿ ಪ್ರಾಧಿಕಾರ ತಯಾರಿಸಿದೆ. ಒಬ್ಬ ನಾಗರೀಕನನ್ನು ಅದ್ವಿತೀಯವಾಗಿ ಗುರುತಿಸುವ ಸಲುವಾಗಿ, ಪೂರ್ವಾಗತ್ಯವಾಗಿ, ಈ ಕೆಳಕಂಡ ಮಾಹಿತಿಯನ್ನು ಅವರಿಂದ ಸಂಗ್ರಹಿಸಲಾಗುವುದು:-

(ಅ) ಭಾವ ಚಿತ್ರ

(ಆ) ಅಕ್ಷಿಪಟಲ ಮೂಲಕ ಗುರುತಿಸುವುದು (IRIS)

(ಇ) ಬೆರಳಚ್ಚು

1.2 ಸದರಿ ಪ್ರಾಧಿಕಾರ ಎಲ್ಲಾ ನಿವಾಸಿಗಳಿಗೆ ನೀಡುವ ಆಧಾರ್ ಸಂಖ್ಯೆಯು 12 ಸಂಖ್ಯೆಗಳ ಅದ್ವಿತೀಯ ಸಂಖ್ಯೆಯಾಗಿದೆ. ಈ ಸಂಖ್ಯೆಯನ್ನು ಕೇಂದ್ರೀಕೃತ ದತ್ತಾಂಶದಲ್ಲಿ ಶೇಖರಿಸಲಾಗುವುದು ಮತ್ತು ಇದನ್ನು ಪ್ರತಿಯೊಬ್ಬ ನಿವಾಸಿಗೆ ಸಂಬಂಧಿಸಿದ ಮೂಲ ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ಮಾಹಿತಿಯೊಂದಿಗೆ-ಭಾವಚಿತ್ರ, ಹತ್ತು ಬೆರಳಚ್ಚುಗಳು ಮತ್ತು ಐರೀಸ್ (IRIS)-ಜೋಡಿಸಲಾಗುವುದು. ಆಧಾರ್ ಸಂಖ್ಯೆಯನ್ನು-

- ಆನ್‌ಲೈನ್ ಮೂಲಕ ಕಡಿಮೆ ದರದಲ್ಲಿ ಸುಲಭವಾಗಿ ಪರಿಶೀಲನೆ ಮಾಡಬಹುದಾಗಿದೆ.
- ಖಾಸಗಿ ಮತ್ತು ಸರ್ಕಾರಿ ದತ್ತಾಂಶಗಳಲ್ಲಿ ಬಹು ಸಂಖ್ಯೆಯಲ್ಲಿರುವ ಡ್ಯೂಪ್ಲಿಕೇಟ್ ಮತ್ತು ಸುಳ್ಳು ಗುರುತುಗಳನ್ನು ತೆಗೆದುಹಾಕಲು ಅದ್ವಿತೀಯ ಮತ್ತು ಸದೃಢವಾಗಿರುತ್ತದೆ.
- ಮನಬಂದಂತೆ (randomly) ಈ ಸಂಖ್ಯೆಯನ್ನು ಸೃಜಿಸಿದ್ದು, ಜಾತಿ ಮತ, ಭೂವಿವರಣೆ, ಇವುಗಳ ಆಧಾರದ ಮೇಲೆ ವರ್ಗೀಕರಿಸದೇ ಇರುವ ಸಂಖ್ಯೆಯಾಗಿದೆ.

2. **ಕರ್ನಾಟಕದಲ್ಲಿ ಆಧಾರ್ ಯೋಜನೆಯ ಜಾರಿಗೊಳಸುವಿಕೆ:**

2.1 ಮೇಲೆ (1)ರಲ್ಲಿ ಓದಲಾದ ದಿನಾಂಕ: 17.12.2009ರ ಸರ್ಕಾರಿ ಆದೇಶದನ್ವಯ, ಆಧಾರ್ ಯೋಜನೆಯನ್ನು ಕರ್ನಾಟಕದಲ್ಲಿ ಜಾರಿಗೊಳಸುವ ಸಲುವಾಗಿ ಇ-ಆಡಳಿತ ಕೇಂದ್ರ, ಬೆಂಗಳೂರು, ಈ ಸಂಸ್ಥೆಯನ್ನು ನೋಡಲ್ ಏಜೆನ್ಸಿಯನ್ನಾಗಿ ಪದನಾಮೀಕರಿಸಲಾಗಿದೆ. ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನೀಡುವ ಆಧಾರ್ ಯೋಜನೆಯನ್ನು ರಾಜ್ಯದಲ್ಲಿ ಜಾರಿಗೊಳಸುವುದಕ್ಕೆ ಸಂಬಂಧಿಸಿದಂತೆ ನಿರ್ಣಯಗಳನ್ನು ತೆಗೆದುಕೊಳ್ಳುವ ಸಲುವಾಗಿ ಮೇಲೆ (2)ರಲ್ಲಿ ಓದಲಾದ ದಿನಾಂಕ: 16.01.2010ರ ಸರ್ಕಾರಿ ಆದೇಶದನ್ವಯ, ಸಚಿವ ಸಂಪುಟದ ಅಧಿಕಾರವುಳ್ಳ ಅಧಿಕಾರಯುಕ್ತ ಸಮಿತಿಯನ್ನು ರಚಿಸಲಾಗಿದೆ.

2.2 ಸದರಿ ಪ್ರಾಧಿಕಾರ ಇ-ಆಡಳಿತ ಕೇಂದ್ರದೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ನಿವೇದನಾ ಪತ್ರ (memorandum of understanding) ದನ್ವಯ, ಆ ಪ್ರಾಧಿಕಾರ ನಿಗದಿಪಡಿಸಿದ ಮಾನದಂಡದ ಪ್ರಕಾರ, ಕರ್ನಾಟಕ ಸರ್ಕಾರದ ಪರವಾಗಿ ರಾಜ್ಯದ ನಿವಾಸಿಗಳಿಗೆ ಸಂಬಂಧಿಸಿದಂತೆ ಜನವಿವರಣೆ ಮತ್ತು ಬಯೋಮೆಟ್ರಿಕ್ (demographic and bio-metric) ಮಾಹಿತಿಯನ್ನು ಸಂಗ್ರಹಿಸಬೇಕಾಗಿದೆ ಮತ್ತು ಅದನ್ನು ಪ್ರಕ್ರಿಯೆಗೊಳಸಿ ಅದ್ವಿತೀಯ ಗುರುತಿನ ಸಂಖ್ಯೆಯನ್ನು ಸೃಷ್ಟಿಸಲು ಅನುವಾಗಲು ಆ ಮಾಹಿತಿಯನ್ನು ಸಿಐಡಿಆರ್ (Central ID Repository)ಗೆ ದಾಖಲಿಸಬೇಕಾಗಿದೆ.

2.3 ಕರ್ನಾಟಕದಲ್ಲಿ ಆಧಾರ್ ಯೋಜನೆಯನ್ನು ಜಾರಿಗೊಳಸಲು ಈ ಕೆಳಕಂಡಂತೆ ತಂತ್ರವನ್ನು ಮೇಲಿನ ಕಂಡಿಕೆ 2.1ರಲ್ಲಿ ಉಲ್ಲೇಖಿಸಿದ ಅಧಿಕಾರಯುಕ್ತ ಸಮಿತಿ ಅನುಮೋದಿಸಿರುತ್ತದೆ:-

(1) ಮೊದಲನೆ ಹಂತ:- ಪ್ರಾಯೋಗಿಕವಾಗಿ ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ಜಾರಿಗೊಳಸುವುದು. ಇದರಿಂದಾಗಿ ನೋಂದಣಿಗೆ ಸಂಬಂಧಿಸಿದಂತೆ, ತಾಂತ್ರಿಕ ಮತ್ತು ನಿರ್ವಹಣಾ ಪ್ರಕ್ರಿಯೆಯನ್ನು ಪರಿಶೀಲಿಸಲು ಮತ್ತು ಉತ್ತಮಪಡಿಸಲು ಆಸ್ಪದವಾಗುತ್ತವೆ.

(2) ಎರಡನೆ ಹಂತ:- ಕರ್ನಾಟಕದ ಇನ್ನೂ ಎಂಟು ಜಿಲ್ಲೆಗಳಲ್ಲಿ, ಪ್ರತೀ ಕಂದಾಯ ವಿಭಾಗಕ್ಕೆ ಎರಡು ಜಿಲ್ಲೆಗಳಂತೆ ಜಾರಿಗೊಳಸುವುದು.

(3) ಮೂರನೆ ಹಂತ:- ಕರ್ನಾಟಕದ ಉಳಿದ 20 ಜಿಲ್ಲೆಗಳಲ್ಲಿ ಜಾರಿಗೊಳಸುವುದು.

(4) ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)] ವನ್ನು ಸೃಜಿಸುವುದು ಮತ್ತು ಅದ್ವಿತೀಯ ಗುರುತಿನ ಸಂಖ್ಯೆಗಳನ್ನು ನಾಗರೀಕರ ಕಲ್ಯಾಣ ಸೇವೆಗಳನ್ನು ನೀಡುವ ಇಲಾಖೆಗಳ ದತ್ತಾಂಶಗಳಲ್ಲಿ ಅಳವಡಿಸಿಕೊಳ್ಳುವುದು. ಇದರಿಂದಾಗಿ ಆ ಸೇವೆಗಳನ್ನು ದಕ್ಷ ರೀತಿಯಲ್ಲಿ ನೀಡಲು ಮತ್ತು ಉಸ್ತುವಾರಿ ಮಾಡಲು ಮತ್ತು ಸೋರಿಕೆಗಳನ್ನು ನಿವಾರಿಸಲು ಅನುವಾಗುತ್ತದೆ.

2.4 ಅಧಿಕಾರಯುಕ್ತ ಸಮಿತಿಯ ನಿರ್ಣಯದಂತೆ ಪ್ರಾಯೋಗಿಕವಾಗಿ (on pilot basis) ಮೈಸೂರು ಮತ್ತು ತುಮಕೂರು ಜಿಲ್ಲೆಗಳಲ್ಲಿ ನೋಂದಣಿಯ ಕಾರ್ಯವನ್ನು ಪ್ರಾರಂಭಿಸಲಾಗಿದೆ. ಪ್ರತಿಯೊಂದು ಜಿಲ್ಲೆಗಾಗಿ ಒಂದೊಂದು ಸಂಸ್ಥೆಯಂತೆ ಎರಡು ಸಂಸ್ಥೆಗಳನ್ನು ನೋಂದಣಿ ಕಾರ್ಯಕ್ಕಾಗಿ, ಸ್ಪರ್ಧಾತ್ಮಕ ಟೆಂಡರ್ ಪ್ರಕ್ರಿಯೆಯ ಮೂಲಕ ತೊಡಗಿಸಲಾಗಿದೆ. ಈ ನೋಂದಣಿ ಕಾರ್ಯಕ್ರಮವನ್ನು ಔಪಚಾರಿಕವಾಗಿ ಮಾನ್ಯ ಮುಖ್ಯಮಂತ್ರಿಯವರು ಮೈಸೂರಿನಲ್ಲಿ ಮತ್ತು ಪೂಜ್ಯ ಶ್ರೀ ಶಿವಕುಮಾರ ಮಹಾ ಸ್ವಾಮಿಗಳು ತುಮಕೂರಿನಲ್ಲಿ ದಿನಾಂಕ 08.10.2010ರಂದು ಉದ್ಘಾಟಿಸಿರುತ್ತಾರೆ.

2.5 ದಿನಾಂಕ: 24.05.2011ರವರೆಗೆ 38,44,987 ನಿವಾಸಿಗಳನ್ನು ನೋಂದಾಯಿಸುವ ಕಾರ್ಯವನ್ನು ಪೂರ್ಣಗೊಳಿಸಿದ್ದು, ಆಧಾರ್ ಯೋಜನೆಯ ಜಾರಿಗೊಳಿಸುವಿಕೆಯಲ್ಲಿ ಕರ್ನಾಟಕ ರಾಜ್ಯ ರಾಷ್ಟ್ರಾದ್ಯಂತ ಮುನ್ನಡೆ ಸಾಧಿಸಿದ ರಾಜ್ಯಗಳ ಪೈಕಿ ಒಂದಾಗಿದೆ. ಜಿಲ್ಲಾವಾರು ಅಂಕಿ ಅಂಶಗಳು ಈ ಕೆಳಕಂಡಂತಿರುತ್ತವೆ:-

| ಜಿಲ್ಲೆಯ ಹೆಸರು | ನೊಂದಾಯಿಸಿದ ಸಂಖ್ಯೆ |
|---|---|
| ಮೈಸೂರು | 2011309 |
| ತುಮಕೂರು | 1833678 |
| ಒಟ್ಟು | 38,44,987 |

3. ವಿವಿಧ ಕಲ್ಯಾಣ ಯೋಜನೆಗಳಡಿಯಲ್ಲಿ ಸಹಾಯಧನ (subsidy) ನೀಡುವ ಸಲುವಾಗಿ ಕರ್ನಾಟಕ ಸರ್ಕಾರ ಪ್ರತಿ ವರ್ಷ ಗಣನೀಯವಾದ ಮೊತ್ತವನ್ನು ವೆಚ್ಚ ಮಾಡುತ್ತದೆ. ಈ ಕೆಳಕಂಡ ಸರ್ಕಾರಿ ಸೇವೆಗಳನ್ನು "Aadhaar enabled" ಮಾಡುವ ಸಲುವಾಗಿ ಆಯ್ಕೆ ಮಾಡಲಾಗಿದೆ:-

| ಕ್ರ. ಸಂ | ಇಲಾಖೆ | ಗುರುತಿಸಿದ ಸೇವೆ |
|---|---|---|
| 1 | ಕಂದಾಯ ಇಲಾಖೆ | ಸಾಮಾಜಿಕ ಭದ್ರತೆ ಪಿಂಚಣಿ |
| 2 | ಇಂಧನ ಇಲಾಖೆ | ಐಪಿ ಪಂಪ್ ಸೆಟ್‌ಗಳು |
| 3 | ಪಶುಸಂಗೋಪನಾ ಇಲಾಖೆ | ಹಾಲು ಸಹಕಾರ ಮಹಾಮಂಡಳದ ಸದಸ್ಯತ್ವ |
| 4 | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ | ಭಾಗ್ಯ ಲಕ್ಷ್ಮಿ ಯೋಜನೆ |
| 5 | ಆಹಾರ, ನಾಗರೀಕ ಸೇವೆಗಳು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ | 1. ಎಲ್‌ಪಿಜಿ ಸಂಪರ್ಕ<br>2. ಪಡಿತರ ಚೀಟಿ |
| 6 | ಆರ್‌ಡಿಪಿಆರ್ | ಮಹಾತ್ಮಗಾಂಧಿ ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಗ್ಯಾರಂಟೀ ಸ್ಕೀಮ್ (ಎಂಜಿಎನ್‌ಆರ್‌ಇಜಿಎಸ್) ಗುರುತಿನ ಚೀಟಿ (job card) |

4. ಅಧ್ಯಕ್ಷರು, ಯುಐಡಿಎಐ, ನವದೆಹಲಿ ಇವರು ಮೇಲೆ (3)ರಲ್ಲಿ ಓದಲಾದ ದಿನಾಂಕ: 14.09.2010ರ ಅರೆ ಸರ್ಕಾರಿ ಪತ್ರ ಸಂಖ್ಯೆ: /4(4)/56/2010-ಯುಐಡಿಎಐ/ಛೇರ್ಮನ್/ ರನ್ವಯ ಈ ಕೆಳಗೆ ಉದ್ಧರಿಸಿದಂತೆ ಸಲಹೆ ಮಾಡಿರುತ್ತಾರೆ:-

"In order to realise the full benefits of issuing of Aadhaar numbers it would, therefore, help if the State Government sets up an institutional mechanism for all its Departments to link Aadhaar number to beneficiary identification in any proposed Social sector scheme. It is suggested that guidelines governing Detailed Project Reports of schemes and their financial concurrence be suitably modified to include specific examination of whether linkage of beneficiary identification in the proposed scheme/project to the Aadhaar number can be done so that the project can be implemented with greater efficiency and accountability.

The Government of India, the Ministry of Finance has issued such guidelines with respect to all Government of India Ministries, ..................... I would be grateful if the State Government also considers taking such an initiative."

XXXX XXXX XXXX

5. ಅದರಂತೆ, ಕರ್ನಾಟಕ ಸರ್ಕಾರ, ಮೇಲೆ (4)ರಲ್ಲಿ ಓದಲಾದ ದಿನಾಂಕ: 20.05.2011ರ ಸರ್ಕಾರಿ ಆದೇಶದಲ್ಲಿ ಒಳಗೊಂಡಂತೆ, (ಆಧಾರ್ ಯೋಜನೆಯೊಂದಿಗೆ) ಕರ್ನಾಟಕ ನಿವಾಸಿ ದತ್ತಾಂಶ ಕೇಂದ್ರ [Karnataka Resident Data Hub (KRDH)} ಯೋಜನೆಯನ್ನು ಮಂಜೂರು ಮಾಡಿದೆ.

6. ಶ್ರೀ ಆರ್.ಎಸ್.ಶರ್ಮ, ಡೈರೆಕ್ಟರ್ ಜನರಲ್ ಮತ್ತು ಮಿಷನ್ ಡೈರೆಕ್ಟರ್, ಯುಐಡಿಎಐ, ಭಾರತ ಸರ್ಕಾರ, ಯೋಜನಾ ಆಯೋಗ, ನವದೆಹಲಿ ಇವರು ಮೇಲೆ (5)ರಲ್ಲಿ ಓದಲಾದ ದಿನಾಂಕ: 31.12.2010ರ ಅರೆ ಸರ್ಕಾರಿ

ಪತ್ರದನ್ವಯ, ರಾಜ್ಯ ಸರ್ಕಾರ ನೀಡುವ ಸೇವೆಗಳನ್ನು ಪಡೆಯುವ ಸಲುವಾಗಿ ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಹಾಗೂ ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂದು ರಾಜ್ಯ ಸರ್ಕಾರಗಳನ್ನು ಕೋರಿರುತ್ತಾರೆ. ಆದಾದ ನಂತರ, ಸಚಿವ ಸಂಪುಟ ಕಾರ್ಯದರ್ಶಿ, ನವದೆಹಲಿ ಇವರು ಮೇಲೆ (6)ರಲ್ಲಿ ಓದಲಾದ ದಿನಾಂಕ: 04.04.2011ರ ಅರೆ ಸರ್ಕಾರಿ ಪತ್ರದನ್ವಯ ಈ ಕೆಳಗೆ ಉದ್ಧರಿಸಿದಂತೆ ಸಲಹೆ ಮಾಡಿರುತ್ತಾರೆ:-

> "Additionally, at the Centre, the line Ministries/Departments concerned have already decided that Aadhaar number would serve as both Proof of Identity and Proof of Address for opening of bank accounts and for obtaining mobile telephone connections, which would facilitate efficient and effective beneficiary identification. On the same analogy, the State Government may examine the desirability of recognizing the Aadhaar number as a Proof of Identity and Proof of Address in the various resident-centric schemes offered by the State."

7. ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಹಾಗೂ ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಿದಲ್ಲಿ, ಅದರಿಂದಾಗಿ ನಿವಾಸಿಗಳಿಗೆ ಈ ಕೆಳಕಂಡ ಮುಖ್ಯ ಅನುಕೂಲಗಳು ಉಂಟಾಗುತ್ತವೆ:-
   (1) ಸಾರ್ವಜನಿಕ ಮತ್ತು ಖಾಸಗಿ ವಲಯದಲ್ಲಿನ ಸಂಸ್ಥೆಗಳು ನೀಡುವ ಸೇವೆಗಳಾದ ಸಬ್ಸಿಡಿಯುಳ್ಳ ಆಹಾರ ಧಾನ್ಯ, ನಿರುದ್ಯೋಗಿ ಸೌಲಭ್ಯಗಳು, ಸಾಮಾಜಿಕ ಭದ್ರತಾ ಪಿಂಚಣಿ, ಬ್ಯಾಂಕ್ ಖಾತೆ ತೆರೆಯಲು, ಪಾಸ್‌ಪೋರ್ಟ್, ವಾಹನ ಚಾಲಕರ ಪರವಾನಿಗೆ ಇತ್ಯಾದಿಗಳನ್ನು ಪಡೆಯಲು ನಿವಾಸಿಗಳು ಪುನ: ಪುನ: ಅವರ ಗುರುತನ್ನು ಸಾಬೀತು ಪಡಿಸುವುದು ಅಗತ್ಯವಿರುವುದಿಲ್ಲ.
   (2) ಆಧಾರ್ ಸಂಖ್ಯೆಯಿಂದ ಗುರುತಿನ ಸಾಕ್ಷಾಧಾರ (proof of identity) ಲಭ್ಯವಾಗಲಿದ್ದು, ಇದರಿಂದಾಗಿ ಬಡ ವರ್ಗಕ್ಕೆ ಸೇರಿದ ನಿವಾಸಿಗಳು ಬ್ಯಾಂಕಿಂಗ್ ಮುಂತಾದ ಸೇವೆಗಳನ್ನು ಪಡೆಯಲು ಅಧಿಕಾರ ಹೊಂದುತ್ತಾರೆ ಮತ್ತು ಸರ್ಕಾರಿ ಹಾಗೂ ಖಾಸಗಿ ವಲಯದಲ್ಲಿನ ಸೇವೆಗಳನ್ನು ಸುಲಭವಾಗಿ ಪಡೆಯಲು ಅವರಿಗೆ ಅವಕಾಶವಾಗುತ್ತದೆ. ಸದರಿ ಪ್ರಾಧಿಕಾರದ ಕೇಂದ್ರೀಕೃತ ತಂತ್ರಾಂಶದ ಮೂಲ ಸೌಕರ್ಯದಿಂದಾಗಿ ಯಾವುದೇ ಸಮಯ, ಯಾವುದೇ ಸ್ಥಳದಲ್ಲಿ, ಯಾವುದೇ ರೀತಿಯಲ್ಲಿ ದೃಢೀಕರಣಕ್ಕಾಗಿ (anytime, anywhere, anyhow authentication) ಆಸ್ಪದವಾಗಿದೆ.

8. ಆದುದರಿಂದ, ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 5 ಯೋಜನೆ 2011, ಬೆಂಗಳೂರು ದಿನಾಂಕ: 15ನೇ ಜುಲೈ, 2011</u>**

9. ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆಯಲ್ಲಿ, ರಾಜ್ಯ ಸರ್ಕಾರದ ಇಲಾಖೆಗಳು ನೀಡುವ ಸೇವೆಗಳನ್ನು ಪಡೆಯುವ ಸಲುವಾಗಿ ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಮತ್ತು ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂದು ಎಲ್ಲಾ ಇಲಾಖೆಗಳಿಗೆ ಸರ್ಕಾರ ಈ ಮೂಲಕ ಸೂಚಿಸುತ್ತದೆ ಮತ್ತು ಆಯಾಯ ಇಲಾಖೆಯ ಆಡಳಿತ ವ್ಯಾಪ್ತಿಯೊಳಗೆ ಬರುವ ಮಂಡಳಿ, ನಿಗಮ, ಸ್ಥಳೀಯ ಸಂಸ್ಥೆ ಇತ್ಯಾದಿಗಳು ನೀಡುವ ಸೇವೆಗಳಿಗೆ ಸಂಬಂಧಿಸಿದಂತೆ ಅದೇ ರೀತಿಯ ಸೂಚನೆಯನ್ನು, {ಅಂದರೆ, ಆಧಾರ್ ಸಂಖ್ಯೆಯನ್ನು ನಿವಾಸಿಗಳ ಗುರುತಿನ ಮತ್ತು ವಿಳಾಸದ ಸಾಕ್ಷಾಧಾರ (proof of identity and proof of address) ವನ್ನಾಗಿ ಮಾನ್ಯತೆ ನೀಡಬೇಕೆಂಬ ಸೂಚನೆ} ಅವುಗಳಿಗೆ (ಆಯಾಯ ಇಲಾಖೆಯ ವತಿಯಿಂದ) ನೀಡತಕ್ಕದೆಂದು ಎಲ್ಲಾ ಇಲಾಖೆಗಳಿಗೆ ಈ ಮೂಲಕ ಸೂಚಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ಎಸ್.ಪ್ರಸನ್ನ ಕುಮಾರ್)
ಪೀಠಾಧಿಕಾರಿ-2
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

ಗೆ,

1. ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ಬೆಂಗಳೂರು

2. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು
3. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು
4. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು
5. ಎಲ್ಲಾ ಇಲಾಖಾ ಮುಖ್ಯಸ್ಥರು
6. ಎಲ್ಲಾ ಜಿಲ್ಲಾಧಿಕಾರಿಗಳು
7. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
8. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಇ-ಆಡಳಿತ ಕೇಂದ್ರ
9. ಸಚಿವ ಸಂಪುಟ ವ್ಯವಹಾರಗಳ ಇಲಾಖೆ (ಸಚಿವ ಸಂಪುಟ ಶಾಖೆ)
10. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ

1. ಮಾನ್ಯ ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು
2. ಅಧ್ಯಕ್ಷರು, ಯೂನಿಕ್ ಐಡೆಂಟಿಫಿಕೇಷನ್ ಅಥಾರಿಟಿ ಆಫ್ ಇಂಡಿಯಾ (ಯುಐಡಿಎಐ), ಯೋಜನಾ ಭವನ್, ಸಂಸತ್ ಮಾರ್ಗ, ನವದೆಹಲಿ-110001 ರವರ ಆಪ್ತ ಕಾರ್ಯದರ್ಶಿಯವರು.